ಸೃಜನಿ

**SRUJANI: Indian Journal of Innovative Research and Development (SIJIRD)**
Volume-3 Issue 2, May-June 2024, Pp. 33-38
Bi-Monthly, Peer-Reviewed, Open Access, Indexed Journal

**I S S N: 2583-3510**
SIRDF JOURNALS
editor@srujani.in
www.srujani.in

# ನಿಜಾಮ್ ಕರ್ನಾಟಕದ ದಲಿತ ಚಳವಳಿಯ ಮೇಲೆ ಮಹನೀಯರ ಚಿಂತನೆಗಳ ಪ್ರಭಾವ

**ಮಹದೇವ[1] & ಡಾ. ವೈ. ಹೆಚ್. ನಾಯಕವಾಡಿ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.

**Abstract:**
*ನಿಜಾಮ್ ಕರ್ನಾಟಕದ ದಲಿತ ಚಳವಳಿಯ ಉದಯದ ಮೇಲೆ ಮಹನೀಯರ ಚಿಂತನೆಗಳ ಪ್ರಭಾವ ಎಂಬ ಶಿರ್ಷಿಕೆ ಅಡಿಯಲ್ಲಿ ಪ್ರಸ್ತುತ ಲೇಖನವನ್ನು ಸಿದ್ಧಪಡಿಸಲಾಗಿದೆ. ಪ್ರಾಚೀನ ಕಾಲದಿಂದ ಮಧ್ಯಕಾಲದ ಭಾರತ ಹಾಗೂ ಆಧುನಿಕ ಭಾರತದ ಕಾಲದವರೆಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಜಡ್ಡುಗಟ್ಟಿದ ಜಾತೀಯತೆ ಪ್ರಪಂಚದ ಯಾವುದೇ ಮೂಲೆಯಲ್ಲಿ ಕಾಣದ ಅಸ್ಪೃಶ್ಯತೆಯ ಆಚರಣೆ ಭಾರತದಲ್ಲಿ ಕಾಣುತ್ತೇವೆ. ಅದರ ಬದಲಾವಣೆಗಾಗಿ ದಲಿತ ಚಳವಳಿ ಉದಯವಾಗಲು ಅನೇಕ ಮಹನೀಯರ ವಿಭಿನ್ನ ವಿಚಾರಗಳು ಕಾರಣವಾಗಿವೆ. ಯಾವುದೇ ಹೊರಾಟ ಅಥವಾ ಚಳವಳಿ ಆರಂಭವಾಗಬೇಕಾದರೆ ಮತ್ತು ಒಂದು ವ್ಯವಸ್ಥಿತ ರೀತಿಯಲ್ಲಿ ಸಮಾಜದ ಮೇಲೆ ಯಾವುದೇ ದುಷ್ಪಪರಿಣಾಮ ಬೀಳದೆ ಸಮಾನ ರೀತಿಯಲ್ಲಿ ಸಮಾನ ಆವಕಾಶಗಳನ್ನು ನಿಡುವ ಚಳುವಳಿಗೆ ತನ್ನದೆ ಆದ ಸಿದ್ಧಾಂತ, ಚಿಂತನೆಗಳ ಪ್ರಭಾವ ಹಾಗೂ ಪ್ರೇರಣೆ ಅತಿ ಅವಶ್ಯಕ ಅಂತಹ ಪ್ರಭಾವ ಮತ್ತು ಪ್ರೇರಣೆಯೂ 1906–1948ರ ಕಾಲಘಟ್ಟದ ನಿಜಾಮ್ ಕರ್ನಾಟಕದ ಮೇಲೆ ಅನೇಕ ಮಹನೀಯರು ಕಾರಣಿಕರ್ತರಾಗಿದ್ದಾರೆ ಅಂತಹ ಮಹನೀಯರನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ.*

**Keywords:** *ನಿಜಾಮ್ ಕರ್ನಾಟಕ, ದಲಿತ ಚಳವಳಿ, ವಚನ ಚಳವಳಿ, ಭಕ್ತಿ ಚಳವಳಿ.*

## ಪೀಠಿಕೆ

ಕರ್ನಾಟಕದಲ್ಲಿ ಹೈದರಾಬಾದ್ ನಿಜಾಮರ ಆಳ್ವಿಕೆ ಕುರಿತು ಮತ್ತು ಪ್ರಮುಖವಾಗಿ ಹೈದರಾಬಾದ್ ನಿಜಾಮರ್ ಆಳ್ವಿಕೆಗೆ ಒಳಪಟ್ಟ ಈಗಿನ ಕಲ್ಯಾಣ ಕರ್ನಾಟಕ ಅಥವಾ ನಿಜಾಮರ ಆಳ್ವಿಕೆಯ ಸಂದರ್ಭದಲ್ಲಿ ಕರೆಯುತ್ತಿದ್ದ ನಿಜಾಮ್ ಕರ್ನಾಟಕ ಕುರಿತು ಸಾಹಿತ್ಯ ಸಮೀಕ್ಷೆ ಆರಂಭಿಸಿದಾಗ ಆ ಭಾಗದಲ್ಲಿ ಇಡೀ ಪ್ರಾಚೀನ ಕಾಲದಿಂದ ಮಧ್ಯಕಾಲದ ಭಾರತ ಹಾಗೂ ಆಧುನಿಕ ಭಾರತದ ಕಾಲದವರೆಗೂ ಸಾಮಾಜಿಕ ವ್ಯವಸ್ಥೆಯಲ್ಲಿ ಜಡ್ಡುಗಟ್ಟಿದ ಜಾತೀಯತೆ ವಿರದ್ಧ ವಿವಿಧ ಕಾಲಘಟ್ಟಗಳಲ್ಲಿ ದಲಿತ ಚಳವಳಿಯೂ ಸೇರಿದಂತೆ ಅನೇಕ ಚಳವಳಿಗಳು ನಡೆಯುತ್ತವೆ. ದಲಿತ ಚಳವಳಿ ಪ್ರಾರಂಭವಾಗಲು ಅನೇಕ ಮಹನೀಯು ಪಾತ್ರ ಪ್ರಮುಖವಾಗಿದೆ. ನಿಜಾಮ್ ಕರ್ನಾಟಕ ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಈ ಮೂರು ಜಿಲ್ಲೆಗಳ ಭಾಗಗಳನ್ನು ಒಳಗೊಂಡಿದೆ. ಇವು ರಾಜ್ಯ ಪುನರ್‌ವಿಂಗಡನೆಯಾದಗ ಕರ್ನಾಟಕ ರಾಜ್ಯದೊಳಗೆ ಸೇರಿದವು.[1] ಈ ಲೇಖನದಲ್ಲಿ 1906–1948ರ ಅವಧಿಯಲ್ಲಿ ನಡೆದ ದಲಿತ ಚಳವಳಿಗಳಿಗೆ ಅನೇಕ ಮಹನೀಯರ ಚಿಂತನೆಗಳು ಕಾರಣವಾಗಿವೆ.

## ದಲಿತ ಪದದ ಹಿನ್ನೆಲೆ

‘ದಲಿತ‘ ಎಂದರೆ “ತುಳಿತಕ್ಕೊಳಗಾದವರು ಎಂದರ್ಥ. ಸಮಾಜದಲ್ಲಿ ಕೀಳೆಂದು ಭಾವಿಸಲಾದ

**Please cite this article as:** ಮಹದೇವ ಮತ್ತು ವೈ. ಹೆಚ್. ನಾಯಕವಾಡಿ. (2024). ನಿಜಾಮ್ ಕರ್ನಾಟಕದ ದಲಿತ ಚಳವಳಿಯ ಉದಯದ ಮೇಲೆ ಮಹನೀಯರ ಚಿಂತನೆಗಳ ಪ್ರಭಾವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(2), 33–38

ವರ್ಗ, ಅಥವಾ ಸಮಾಜದಲ್ಲಿ ದಃಖಿತ ವರ್ಗವಾಗಿದೆ ಮತ್ತು ಯಾವುದೇ ಬಗೆಯ ಸಾರ್ವಜನಿಕ ಸೌಲಭ್ಯಗಳಿಲ್ಲದೇ ಹಲವಾರು ಕಟ್ಟುಪಾಡುಗಳಿಗೆ ಒಳಗಾಗಿ, ಊರ ಹೊರಗೆದೂಡಲ್ಪಟ್ಟ, ಅಸ್ಪೃಶ್ಯರೆಂಬ ನಿಂದನೆಗೆ ಒಳಗಾದವರನ್ನು ದಲಿತರೆಂದು ಗುರುತಿಸಲಾಗಿದೆ. ಸ್ವಾತಂತ್ರ್ಯಾ ನಂತರ ಭಾರತ ಸರಕಾರವು ಅನಾದಿಕಾಲದಿಂದ ಶೋಷಿತರಾದವರನ್ನು ಗುರುತಿಸಿ ಒಂದು ಪಟ್ಟಿಯನ್ನು ತಯಾರಿಸಿ ಇಂತವರನ್ನು ಪರಿಶಿಷ್ಟ ಜಾತಿ, ಜನರೆಂದು ಗುರುತಿಸಲಾಗಿದೆ.

ದಲಿತ ಚಳವಳಿಯ ಉದಯ ಮತ್ತು ಅದರ ವಿಕಾಸಕ್ಕೆ ಪ್ರಮುಖ ಕಾರಣಿಕರ್ತರು ಆಗಿರುವಂತಹ ಬುದ್ಧಿಜೀವಿಗಳು ದೂರದರ್ಶಿ, ಸಮಾಜ ಮತ್ತು ದೇಶದ ಹಿತ ಮಾಡುವವನು. ಅವನು ತನ್ನ ಕಾರ್ಯವೃತ್ತಿ ಅಥವಾ ಪದ್ಧತಿಯಿಂದ ಬೇರೆಯವರಿಗೆ ವಿಕಾಸಗೊಳ್ಳುವ ಮಾರ್ಗ ಸೂಚಿಸುವವನು, ಪ್ರೇರಣೆ ನೀಡುವವನು ಎಂಬುವುದಾಗಿದೆ. ಡಾ ಬಿ.ಆರ್. ಅಂಬೇಡ್ಕರ್ ರವರ ಪ್ರಕಾರ ಬುದ್ಧಿಜೀವಿ ವರ್ಗವೆಂದರೆ ದೂರದರ್ಶಿಯಾಗಿದ್ದು, ಸಲಹೆ ನೀಡುವವನು ಮತ್ತು ಮುಂದಾಳುತನವನ್ನು ನೀಡಬಲ್ಲವನು. ಯಾವುದೇ ಒಂದು ದೇಶ, ಒಂದು ರಾಜ್ಯ ಹಾಗೂ ಯಾವೋದೊ ಒಂದು ಪ್ರದೇಶದ ಸಂಪೂರ್ಣ ಭವಿಷ್ಯ ಅದರ ಬುದ್ಧಿಜೀವಿ ವರ್ಗದ ಮೇಲೆ ಅವಲಂಬಿಸಿದೆ.[2] ಡಾ. ಅಂಬೇಡ್ಕರ್ ಅವರ ಈ ಮೇಲಿನ ವಿಚಾರವು ತನಗೆ ತಾನೆ ಸರಿಯಿದೆ ಎಂಬುವುದು ಸ್ಪಷ್ಟವಾಗುತ್ತದೆ.

**ಪ್ರಾಚೀನ ಕಾಲದ ಮಹನೀಯರ ಪ್ರಭಾವ**

***ಚಾರ್ವಾಕ***

ನಿಜಾಮ್ ಕರ್ನಾಟಕದಲ್ಲಿ 1906–1948ರ ಕಾಲಾವಧಿಯಲ್ಲಿ ಹುಟ್ಟಿಕೊಂಡಿರುವ ದಲಿತ ಸಮುದಾಯದ ಹೋರಾಟ ಅಥವಾ ಚಳವಳಿಯ ಮೂಲ ಮಾನವ ಚಾರ್ವಾಕನೆಂದರೆ ತಪ್ಪಾಗಲಾರದು. ಪಂಚೇಂದ್ರಿಯಗಳ ಅನುಭವದಿಂದ ಬರುವುದೇ ಸ್ಥಿರವಾದ ಜ್ಞಾನವೆಂದು ಅವರು ನಂಬಿದ್ದರು. ಸಾಲ ಮಾಡಿಯಾದರೂ ತುಪ್ಪ ತಿನ್ನೋಣ ಎಂದು ಪ್ರಪ್ರಥಮವಾಗಿ ವೈದಿಕರ ವಿರುದ್ಧ ಯುದ್ಧ ಸಾರಿದ್ದು ಚಾರ್ವಾಕರೆ ಮತ್ತೆ ಮುಂದುವರೆದು ಚಾರ್ವಾಕರು ತಮ್ಮ ಅಮೂಲ್ಯವಾದ ಜ್ಞಾನದಿಂದ ಪ್ರಾಚೀನ ಕಾಲದಲ್ಲಿ ಘಟಿಸಿದೆ ಎನ್ನಲಾದ ಕುರುಕ್ಷೇತ್ರ ಯುದ್ಧದ ನಂತರ ಕೌರವರು ನಾಶವಾದಂತೆ ಧರ್ಮರಾಯನಿಗೆ ಪಟ್ಟಾಭಿಷೇಕ ನಡೆದ ಸಂದರ್ಭದಲ್ಲಿ ಎಲ್ಲಾ ಬ್ರಾಹ್ಮಣರಿಗೆ ಹಾಡಿ ಹೊಗಳುವಾಗ ಒಬ್ಬನ ಮಾತು ಕೌರವ ಸೋದರರ ರಕ್ತದಲ್ಲಿ ಪಡೆದ ಈ ಅಧಿಕಾರ ಅಪವಿತ್ರವಾದುದ್ದು, ಅನ್ಯಾಯದಿಂದ ಕೂಡಿದ್ದೆಂದು ವಿರೋಧಿಸಿದ್ದು ನೋಡಿ ಅಲ್ಲಿ ಸೇರಿದ್ದ ವೈದಿಕ ವರ್ಗ ಆ ಚಾರ್ವಾಕನನ್ನು ಕೊಂದು ಹಾಕಿರಿ ಎಂದು ಎಲ್ಲರೂ ಸೇರಿ ಹಿಡಿದು ನೆಲಕ್ಕೆ ಹಾಕಿಕೊಂದರು. ಆದರೆ ಆ ಮಹಾನುಭವನ ವಿಚಾರಗಳು ಕಾಲಕಾಲಕ್ಕೆ ಜನರಿಂದ ಜನರೆಡೆಗೆ ಸಾಗಿ ಬಂದುದರ ಫಲವೆ 1906–1948ರ ಕಾಲದ ದಲಿತ ಚಳವಳಿಯಲ್ಲಿ ಕಾಣುತ್ತೇವೆ.[3]

***ಬುದ್ಧ***

ಭಾರತದ ಪ್ರಾಚೀನ ಕಾಲದಲ್ಲಿ ವೈದಿಕರ ಕರ್ಮಸಿದ್ಧಾಂತ, ಕರ್ಮಕಾಂಡಗಳ ಹಾವಳಿಗೆ ಬೇಸತ್ತ ಜನರ ದಾರಿದೀಪವಾಗಿ ಬಂದವನು ಬುದ್ಧ. ನಿಮಗೆ ನೀವೇ ಬೆಳಕಾಗಬೇಕೆಂದು ವೈದಿಕರ ಎಲ್ಲಾ ಸೀಳು ಮತ್ತು ಆಳು ನೀತಿಯನ್ನು ಸುಟ್ಟು ಹಾಕಿ ಪ್ರಸ್ತುತ ದಲಿತರು ಎನಿಸಿಕೊಳ್ಳುವ ಅಂದಿನ ಅಸ್ಪೃಶ್ಯರನ್ನು ಬೋಧಿವೃಕ್ಷದ ಕೆಳಗೆ ಸೇರಿಸಿ ಧರ್ಮತತ್ವ, ಸರ್ವರಿಗೂ ಸಮತ ಸ್ವಾತಂತ್ರ್ಯ, ಸಹೋದರತ್ವ, ಸುಖ, ಶಾಂತಿ, ಸಮೃದ್ಧಿ ಸಿಗುವಂತೆ ಹೋರಾಟ ಅಥವಾ ಚಳವಳಿಯನ್ನು ನಡೆಸಿದರು. ದೇವರ ಅಸ್ತಿತ್ವಕ್ಕಿಂತಲೂ ಮನುಷ್ಯತ್ವ ಹೆಚ್ಚಿನದೆಂದು ಲೋಕಕ್ಕೆ ತಿಳಿಸಿದರು. ಅಂದಿನ ಕಾಲಘಟ್ಟದ ವೈದಿಕರು ಜಾತೀಯತೆ ಅಥವಾ ಸಮಾನತೆಯ ಬಗ್ಗೆ ಬುದ್ಧನನ್ನು ಕೇಳಿದಾಗ ಪ್ರಾರಂಭದಲ್ಲಿ ಎಲ್ಲರೂ ಸಮಾನಾರಾಗಿದ್ದರು. ಎಲ್ಲರಿಗೂ ಸಂಪನ್ಮೂಲಕ್ಕೆ ಸಂಬಂಧಿಸಿದಂತೆ ಸಮಾನ ಅವಕಾಶಗಳಿದ್ದವು. ಹೀಗೆ ಬುದ್ಧನಲ್ಲಿ ಶುದ್ಧ ಕಲ್ಪನಾಲೋಕ ಚಿಂತನಗಳು ಇತ್ತು.[4] ಇಂತಹ ಆಲೋಚನೆಯಿಂದ ಬೇರೆ ಬೇರೆ ಜನಾಂಗದ ಜನರಾದ ಅಂದಿನ ಕಾಲದ ಸುಜಾತ, ಅಂಗುಲಿ ಮಾಲ ಮುಂತಾದವರನ್ನು ಜ್ಞಾನಿಗಳನ್ನಾಗಿ ಮಾಡಿ ದೀನದಲಿತರಾದ ಅಸ್ಪೃಶ್ಯ, ಚಾಂಡಳ, ಪಂಚಮ ಜನರೆಲ್ಲರನ್ನೂ ಒಂದೇ ಬೆಳಕಿನಡೆಯಲ್ಲಿ ತಂದರು.

ಇಂತಹ ಅನೇಕ ಚಿಂತನೆಗಳ ಮೂಲಕ ಅಂದಿನ ಕಾಲದಲ್ಲಿದ್ದ ಜಾತಿ ತಾರತಮ್ಯತೆಯನ್ನು ಪ್ರಾಚೀನ ಕಾಲದಲ್ಲಿಯೇ ಅಳಿಸಿ ಹಾಕಿದರು. ಇಂತಹ ಚಿಂತನೆಗಳು ಕಾಲಂತರದಲ್ಲಿಯೂ ಹಾಗೆ ಪ್ರಭಾವವೂ

ಬೀರಿದವು. ಈ ಚಿಂತನೆಗಳು ಅಲ್ಲಿಗೆ ನಿಲ್ಲದೇ ಪ್ರಾಚೀನ ಕಾಲದಿಂದ ಮಧ್ಯಕಾಲ ಮತ್ತು ಆಧುನಿಕ ಕಾಲಘಟ್ಟದವರಿಗೂ ಮುಂದುವರೆದಿರುವುದು ಭಾರತದ ಚರಿತ್ರೆಯಲ್ಲಿ ಕಾಣುತ್ತೇವೆ. ಇಂತಹ ಹಲವು ಕಾರಣಗಳಿಂದ ಆಧುನಿಕ ಭಾರತದ ದಲಿತ ಚಳವಳಿಯ ಮೇಲೆ ಬುದ್ಧನ ಪ್ರಭಾವ ಅಗಾಧವಾಗಿದೆ.

**ವಚನಕಾರರ ಪ್ರಭಾವ**

**ಬಸವಣ್ಣ:** ಮಧ್ಯಯುಗ ರಾಜ–ಮಹಾರಾಜರ ಆಳ್ವಿಕೆಯ ಕಾಲವಾಗಿತ್ತು. ಶ್ರೇಣಿಕೃತ ಜಾತಿಪದ್ಧತಿ ಜಾರಿಯಲ್ಲಿತ್ತು. ಜಾತಿಯೆಂಬ ಸಾಮಾಜಿಕ ವ್ಯವಸ್ಥೆಯನ್ನು ಜನರ ಮಧ್ಯೆ ಗೋಡೆಯಾಗಿ ನಿರ್ಮಾಣ ಮಾಡಿ ಎಲ್ಲಾ ರೀತಿಯ ಅಸಮಾನತೆಯನ್ನು ಸಮಾಜದ ಮೇಲೆ ಹೇರಿ ಕೆಳಜಾತಿಗಳನ್ನು ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು. ಇದರ ವಿರುದ್ಧ ಬಸವಣ್ಣ ವಚನ ಸಾಹಿತ್ಯದ ಮೂಲಕ ವೈದಿಕಶಾಹಿಯ ವಿರುದ್ಧ ಹೋರಾಡಿದರು. ವೈದಿಕರು ಪಾಪ ಪುಣ್ಯ, ಸ್ವರ್ಗ–ನರಕ, ಕೈಲಾಸ–ವೈಕುಂಠ, ಮಂತ್ರ–ತಂತ್ರ, ಜೋತಿಷ್ಯ–ಪಂಚಾಂಗ, ಪ್ರಾಣಿಬಲಿ, ನರಬಲಿ, ಯಾಗ–ಯಜ್ಞ ಹೋಮ ಹವನದ ಹೆಸರಿನಲ್ಲಿ ಮೌಢ್ಯವನ್ನು ಬಿತ್ತಿದರು. ದೇವರು, ಧರ್ಮ, ದೇವಸ್ಥಾನ ಎಂಬ ಸಂಸ್ಥೆಗಳನ್ನು ಸ್ಥಾಪಿಸಿ ಜನರ ಪ್ರತಿಭಟನೆ ಧ್ವನಿಯನ್ನು ಹತ್ತಿಕ್ಕಿದ್ದರು. ಇಂತಹ ಅಮಾನವೀಯ, ಅಸಮಾನ, ಅಪಮಾನ ಮತ್ತು ಶೋಷಣೆಯ ವಿರುದ್ಧ ಹೊರಾಡುವಂತೆ ಬಸವಣ್ಣ ಮಾಡಿದರು.[5] ಬಸವಣ್ಣನವರ ಚಿಂತನೆಗಳ ಪ್ರಭಾವಕ್ಕೊಳಗಾದ ಕಾಳೆವ್ವ, ಮಾದಾರ ಚೆನ್ನಯ್ಯ, ಅಕ್ಕಮಾಹಾದೇವಿ ಮುಂತಾದವರು ಶೋಷಣೆಯ ವಿರುದ್ಧ ದ್ವನಿ ಎತ್ತಿದರು. ವಚನಕಾರರು ನುಡಿದಂತೆ ಬದುಕಿದವರು.[6] ವಚನಕಾರರ ಈ ಚಳುವಳಿಯೂ ಕೂಡ ದಲಿ ಚಳವಳಿಯ ಮೇಲೆ ಪ್ರಭಾವ ಬೀರಿದೆ.

**ಭಕ್ತಿ ಚಳವಳಿಕಾರರ ಪ್ರಭಾವ**

ಭಕ್ತಿ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ರಮಾನಂದರೂ ಬ್ರಾಹ್ಮಣರಾದರೂ ಜಾತಿ ಧಾರ್ಮಿಕ ನಿಯಮಗಳಿಗೆ ವಿರೋಧ ವ್ಯಕ್ತಪಡಿಸಿದರು. ಜಾತಿಕಟ್ಟಳೆಗಳನ್ನು ಮತ್ತು ಅಂದಿನ ಕಾಲದಲ್ಲಿದ್ದ ಜಾತಿಭೇದಗಳನ್ನು ಖಂಡಿಸಿದರು. ಇವರ ಶಿಷ್ಯರಾದ ಕಬೀರ್‌ದಾಸರು ಮತ್ತು ಅಂದಿನ ಕಾಲದ ಅನೇಕ ಮಹನೀಯರಾದ ನಂದನರ್ ನಾನಕ್, ಚೋಕಮೇಳ, ರವಿದಾಸ್, ಗುರುನಾನಕ್ ಮೊದಲಾದ ಮಹನೀಯರು ತಮ್ಮ ಪ್ರಮುಖ ಚಿಂತನೆಗಳ ಮೂಲಕ ಜಾತಿ ಬೇಧವನ್ನು ಖಂಡಿಸಿದರು. ಇವರಲ್ಲದೆ ತುಳಸಿದಾಸರು, ಸೂರದಾಸರು, ಮೀರಬಾಯಿ, ಜ್ಞಾನೇಶ್ವರ, ತುಕರಾಮ ಇನ್ನಿತರರು ಜಾತಿಯ ನಿರ್ಮೂಲನೆಗಾಗಿ ಸಂಪ್ರದಾಯದ ಕಟ್ಟಳೆಯನ್ನು ಮುರಿಯಲು ಪ್ರಯತ್ನಿಸಿದರು. ಇಂತಹ ಹಲವು ವಿಚಾರಗಳು ನಂತರದ ಕಾಲದಲ್ಲಿನ ದಲಿತಪರ ಹೋರಾಟಗಾರರು ಅಥವಾ ದಲಿತಪರ ಚಳವಳಿಗಾರರ ಮೇಲೆ ಆಗಿದ್ದರಲ್ಲಿ ಯಾವುದೇ ಅನುಮಾನವಿಲ್ಲ. ಮೇಲ್ಜಾತಿಗಳಿಗೆ ಸರ್ವಾಧಿಕಾರ ಇರುವವರೆಗೆ ಕೆಳಜಾತಿಗಳಿಗೆ ವಿಮೋಚನೆ ಇಲ್ಲವೆಂಬ ಭಕ್ತಿ ಚಳವಳಿಕಾರರ ಸೂತ್ರೀಕರಣಗಳು ನಿಜಾಮ್ ಕರ್ನಾಟಕದ ದಲಿತ ಚಳವಳಿಗೆ ಪ್ರಾಥಮಿಕ ಅಂಶಗಳಾದವು.[7] 20ನೇ ಶತಮಾನದ ದಲಿತ ಚಳವಳಿಯ ಮೇಲೆ ವಿಶೇಷವಾಗಿ ನಿಜಾಮ್ ಕರ್ನಾಟಕದ ಭಾಗದಲ್ಲಿನ ದಲಿತ ಚಳವಳಿಯ ಮೇಲೆ ಭಕ್ತಿ ಚಳವಳಿಕಾರರ ಪ್ರಭಾವವೂ ಕೂಡ ಹೆಚ್ಚಿರುವುದನ್ನು ಅಧ್ಯಯನದ ಸಂದರ್ಭದಲ್ಲಿ ಗುರುತಿಸಲಾಗಿದೆ.

**ಆಧುನಿಕ ಕಾಲದ ಮಹನೀಯರ ಚಿಂತನೆಗಳ ಪ್ರಭಾವ**

***ಜ್ಯೋತಿಬಾ ಫುಲೆ***

19ನೇ ಶತಮಾನದಲ್ಲಿ ಭಾರತದಲ್ಲಿ ಉದಯಿಸಿದ ಅನೇಕ ಸಮಾಜ ಸುಧಾರಕರಲ್ಲಿ ಜ್ಯೋತಿಬಾ ಫುಲೆಯವರಿಗೆ ವಿಶಿಷ್ಟ ಸ್ಥಾನವಿದೆ. ಆಧುನಿಕ ಭಾರತದಲ್ಲಿ ಸ್ವಾಭಿಮಾನದ ಬದುಕಿಗಾಗಿ ಆರಂಭವಾದ ದಲಿತ ಚಳವಳಿಯನ್ನು ಕಟ್ಟಿ ಬೆಳಸಿದವರಲ್ಲಿ ಜ್ಯೋತಿಬಾ ಫುಲೆಯವರು ಮೊದಲ ಸಾಲಿಗೆ ಸೇರಿದವರು. ಧಾರ್ಮಿಕ ಅಂಧಶ್ರದ್ಧೆ, ಕಟ್ಟುಪಾಡು, ಮಡಿಮೈಲಿಗೆಯ ಅಸ್ಪೃಶ್ಯ ಆಚರಣೆಗಳಿಂದ ಗಬ್ಬೆದ್ದ ಸಾಮಾಜಿಕ ಸ್ಥಿತಿಯಿಂದಾಗಿ ಕೆಳವರ್ಗದ ಸಮುದಾಯಗಳು ನರಕಯಾತನೆ ಅನುಭವಿಸಬೇಕಿತ್ತು. ಆ ಸಂದರ್ಭದಲ್ಲೇ ಜ್ಯೋತಿಬಾ ಫುಲೆಯವರು ಭಾರತೀಯ ಜಾತಿವ್ಯವಸ್ಥೆ ಮತ್ತು ಜೀವ ವಿರೋಧಿ ಹಿಂದುತ್ವದ ವಿರುದ್ಧ ಸಮರ ಸಾರಿದರು. ತಳ ಸಮೂದಾಯದ ಬದುಕುವ ಹಕ್ಕನ್ನು ಕಿತ್ತುಕೊಂಡಿದ್ದ ಹಿಂದೂಶಾಸ್ತ್ರಗಳು ಮತ್ತು ಪದ್ಧತಿಗಳನ್ನು ವಿರೋಧಿಸುವ ಚಳವಳಿಯನ್ನು

ಫುಲೆಯವರು ಹುಟ್ಟುಹಾಕಿದರು.[8] ಹೀಗಾಗಿ ಮಹಾತ್ಮ ಜ್ಯೋತಿಬಾ ಫುಲೆಯವರ ಸಾಮಾಜಿಕ ಕ್ರಾಂತಿಯ ಪ್ರಭಾವ ನಿಜಾಮ್ ಕರ್ನಾಟಕದ ಮೇಲೆ ಸಾಕಷ್ಟು ಆಗಿದೆ.

***ಡಾ. ಬಿ. ಆರ್. ಅಂಬೇಡ್ಕರ್***

ಜ್ಯೋತಿಬಾ ಫುಲೆಯವರ ಚಿಂತನೆಗಳಿಂದ ಪ್ರೇರಿತರಾದ ಡಾ.ಬಿ.ಆರ್. ಅಂಬೇಡ್ಕರ್ 'ನಮ್ಮೊಂದಿಗೆ ಮಾರ್ಕ್ಸ್‌ರನ್ನು ಜೊತೆಗೆ ಒಯ್ಯಬಹುದು, ಒಯ್ಯದಿರಬಹುದು, ಆದರೆ ಜ್ಯೋತಿಬಾ ಅವರ ತತ್ವಗಳನ್ನು ಯಾವುದೇ ಕಾರಣಕ್ಕೂ ತ್ಯಜಿಸುವುದಿಲ್ಲ.[9] ಎಂದು ಹೇಳುತ್ತಾರೆ. ಇದು ಕೂಡ 20ನೇ ಶತಮಾನದಲ್ಲಿ ಭಾರತದ ಎಲ್ಲಾ ರಾಜ್ಯಗಳಲ್ಲೂ ಹಾಗೂ ಭಾರತದ ಪ್ರಾದೇಶಿಕ ನೆಲೆಯಲ್ಲಿ ಆರಂಭಗೊಂಡ ದಲಿತ ಚಳವಳಿಯ ಮೇಲೆ ಸಾಕಷ್ಟು ಪ್ರಭಾವ ಬೀರಿರುವುದು ಕಾಣುತ್ತೇವೆ. ಅದು ನಿಜಾಮ್ ಸಂಸ್ಥಾನ ಹಾಗೂ ನಿಜಾಮ್ ಕರ್ನಾಟಕದಲ್ಲಿನ ದಲಿತ ಚಳವಳಿಯ ಮೇಲೆ ಪ್ರಭಾವ ಬೀರಿದೆ. ಆಧುನಿಕ ಭಾರತದಲ್ಲಿ ಜೀವಪರ ಹೋರಾಟ ಅಥವಾ ಚಳವಳಿ, ಸಂಘಟನಾತ್ಮಕ ಚಿಂತನೆ ನಡೆಸಿದ ಪ್ರಮುಖರಲ್ಲಿ ಡಾ. ಅಂಬೇಡ್ಕರ್ ಪ್ರಮುಖರು. ಅವರು ನೊಂದವರ, ದುಡಿಯುವ ವರ್ಗಗಳ, ಶೋಷಿತರ, ದೀನ–ದಲಿತರ ಬಾಳಿಗೆ ಬೆಳ್ಳಿಚುಕ್ಕೆಯಾಗಿದ್ದಾರೆ. ಶತಶತಮಾನಗಳ ಕಾಲ ಅನ್ಯಾಯ, ಅವಮಾನ, ದೌರ್ಜನ್ಯ, ಶೋಷಣೆ, ತುಳಿತಕ್ಕೆ ಒಳಗಾದ ಜನಸಮೂದಾಯಗಳಿಗೆ ಸಾಂತ್ವನ ನೀಡಿ, ಆತ್ಮಸ್ಥೈರ್ಯ ತುಂಬಿ, ಸ್ವಾಭಿಮಾನದ ಜಾಗೃತಿಯನ್ನು ಉಂಟುಮಾಡಿದ ಕೀರ್ತಿ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ.

ಈ ರೀತಿಯಾದ ವಿಚಾರಗಳು ಹೊಂದಿರುವ ಡಾ. ಅಂಬೇಡ್ಕರ್ ಅವರು ತಮ್ಮ ಜೀವಿತ ಅವಧಿಯಲ್ಲಿ ಗುಲ್ಬರ್ಗ ಜಿಲ್ಲೆಯ ವಾಡಿ ಪಟ್ಟಣಕ್ಕೆ ಎರಡೂ ಸಲ ಭೇಟಿ ನೀಡಿದ್ದರು. ಈ ನೆನಪು ಎಂದಿಗೂ ಕೂಡ ಮಾಸದು. 1944ರ ಏಪ್ರಿಲ್ 28 ಮತ್ತು 1952ರ ಏಪ್ರಿಲ್ 27ರಂದು ಪಟ್ಟಣಕ್ಕೆ ಭೇಟಿ ನೀಡಿದ್ದ ಅಂಬೇಡ್ಕರ್ ಅವರು ಸ್ಥಳೀಯರೊಂದಿಗೆ ಸಂವಾದ ನಡೆಸಿದ್ದರು, ಅವರ ವಿಚಾರಗಳನ್ನು ಹಂಚಿಕೊಂಡಿದ್ದರು. ವಾಡಿ ರೈಲು ನಿಲ್ದಾಣದಲ್ಲಿ ಅಂಬೇಡ್ಕರ್ ಅವರು ಇಳಿದಿದ್ದನು ಕಂಡು ಅಲ್ಲಿನ ಚಹ ಮಾರಟಗಾರ ದಿಲ್ವರ್ ಹಸೆನ್ ಸ್ಥಳೀಯರಿಗೆ ಮಾಹಿತಿ ನೀಡಿದ್ದರು. ನಿಲ್ದಾಣದಲ್ಲಿ ಜಮಾಯಿಸಿದ ಸ್ಥಳೀಯರು ಮತ್ತು ದಲಿತ ಸಮುದಾಯದ ಮುಖಂಡರು ಅಂಬೇಡ್ಕರ್ ಅವರಿಗೆ ಹೂಮಾಲೆ ಹಾಕಿ ಸನ್ಮಾನಿಸಿದರು. ಮಕ್ಕಳಿಗೆ ಒಳ್ಳೆ ಶಿಕ್ಷಣ ನೀಡಿದರೆ. ಅದುವೇ ನೀವು ನನಗೆ ನೀಡುವ ಗೌರವ ಎಂದು ಅಂಬೇಡ್ಕರ್ ಹೇಳಿದ್ದರು. ಅಂದಿನಿಂದ ಈ ಭಾಗದಲ್ಲಿ ದೇವರ ಹೆಸರಲ್ಲಿ ಖಾಂಡ ಮಾಡುವ ಪದ್ಧತಿಗೆ ವಿದಾಯ ಹೇಳಿದರು.

ಇದನ್ನು ಅಂದಿನ ದಲಿತ ಮುಖಂಡರಾದ ಅಮೃತರಾವ್ ಕೋಮಟೆ, ಟೋಪಣ್ಣ ಕೋಮಟೆ ಅವರು ಅಂಬೇಡ್ಕರ್ ಅವರ ಮಾತುಗಳನ್ನು ಆಲಿಸಿದ್ದರು. ಅವರು ಕಣ್ಣಾರೆ ಕಂಡಿದ್ದನ್ನು ಆಗಾಗೆ ನೆನಪಿಸಿಕೊಳ್ಳುತ್ತಿದ್ದರು. ಈ ಎಲ್ಲಾ ಮೇಲಿನ ಅಂಶಗಳಿಂದ ಡಾ. ಅಂಬೇಡ್ಕರ್ ಅವರ ಒಡನಾಟ ನಿಜಾಮ್ ಕರ್ನಾಟಕದಲ್ಲಿತ್ತು ಎಂಬುದು ಸ್ಪಷ್ಟವಿದೆ. ಈ ಮೇಲೀನ ಅಂಶಗಳಲ್ಲದೇ 1920ರಿಂದಲೇ ಡಾ.ಬಿ.ಆರ್. ಅಂಬೇಡ್ಕರ್ ಅವರು ನಿಜಾಮ್ ಸಂಸ್ಥಾನದೊಂದಿಗೆ ಒಡನಾಟ ಹೊಂದಿದ್ದರು ಏಕೆಂದರೆ ಭಾರತದ ಇತರೆ ರಾಜ್ಯಗಳನ್ನು ಅವಲೋಕಿಸಿದಾಗ ನಿಜಾಮ್ ಸಂಸ್ಥಾನದಲ್ಲಿ ದಲಿತ ಜಾಗೃತಿ ಕ್ರಮಗಳು ಅತ್ಯಂತ ಚುರಕಿನ ರೀತಿಯಲ್ಲಿ ನಡೆಯುತ್ತಿದ್ದವು. ಹಾಗೆ ಮುಂದುವರೆದು ನಿಜಾಮ್ ಕರ್ನಾಟಕದ ಪ್ರಮುಖ ದಲಿತ ಚಳವಳಿಗಾರರಾದ ಶಿವರಾಮ್ ಮೋಘ ಅವರು ಅಂಬೇಡ್ಕರ್ ಅವರ ಒಡನಾಟದಲ್ಲಿದ್ದ ಅವರು ಡಾ. ಅಂಬೇಡ್ಕರ್ ಅವರನ್ನು ಮೂರು ಬಾರಿ ನಿಜಾಮ್ ಕರ್ನಾಟಕದ ಬೀದರ್ ಜಿಲ್ಲೆಗೆ ಕರೆಯಿಸಿ ಅಲ್ಲಿನ ದಲಿತರಲ್ಲಿ ಜಾಗೃತಿ ಮೂಡಿಸಿದರು. ಇಂತಹ ಹಲವು ಕಾರಣಗಳಿಂದಾಗಿ ಡಾ.ಅಂಬೇಡ್ಕರ್ ಅವರ ಚಿಂತನೆಗಳ ಪ್ರಭಾವ ನಿಜಾಮ್ ಕರ್ನಾಟಕದ ದಲಿತ ಚಳವಳಿಯ ನಾಯಕರ ಮೇಲೆ ಪರಿಣಾಮ ಬೀರಿರುವುದು ಅಧ್ಯಯನದಿಂದ ಸ್ಪಷ್ಟವಾಗಿದೆ.

***ಗಾಂಧೀಜಿ***

ಗಾಂಧೀಜಿಯವರು ಕಾರ್ಮಿಕರ ಮೊಕದ್ದಮೆ –ಯೊಂದರಲ್ಲಿ ವಾದಿಸಲು ದಕ್ಷಿಣ ಆಫ್ರಿಕಾಗೆ ಹೋಗುವಾಗ ನಡೆದ ಘಟನೆಯಿಂದ ಅಸ್ಪೃಶ್ಯತೆಯ ಅನುಭವಾಯಿತು. ಆಗ ಅವರಿಗೆ ಭಾರತದ ಅಸ್ಪೃಶ್ಯರು ಎದುರಿಸುತ್ತಿದ್ದ ಅಪಮಾನ ನೋವು ಸಂಕಟಗಳು ಅವರಿಗೆ ಅರಿವಿಗೆ ಬಂದವು. ಆ ನಂತರ ಗಾಂಧೀಜಿಯವರು ಅಸ್ಪೃಶ್ಯತೆ ನಿವಾರಣೆಗೆ ವಿವಿಧ

ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಜಾಗೃತಿ ಮೂಢಿಸಿದರು. ಇವರ ಪ್ರಯತ್ನದ ಫಲವಾಗಿ ಹಲವಾರು ಮೇಲ್ಜಾತಿ ಜನರೂ ಕೂಡ ಅಸ್ಪೃಶ್ಯತೆಯ ವಿರುದ್ಧ ಹೋರಾಡಲು ಸಿದ್ಧರಾದರು. ಇವರ ಈ ಕಾರ್ಯದಿಂದಾಗಿ ದಲಿತರಲ್ಲಿ ಜಾಗೃತಿಯುಂಟಾಗಿ ಚಳವಳಿಗಳನ್ನು ಪ್ರಾರಂಭಿಸಿದರು.

ದೀನದಲಿತರಿಗಾಗಿ ಜೀವನ ಸುಧಾರಣೆಗಾಗಿ ಜ್ಯೋತಿಬಾ ಫುಲೆ ಹಾಗೂ ಅಂಬೇಡ್ಕರ ಅವರನ್ನು ಹೊರತುಪಡಿಸಿದರೆ ಗಾಂಧೀಜಿ ಅವರು ಮಾಡಿದ ಹರಿಜನರೋದ್ಧಾರ ಕಾರ್ಯಗಳು ಪ್ರಮುಖವಾದವುಗಳಾಗಿವೆ.[10]

ಹೀಗೆ ಗಾಂಧೀಜಿ ಅವರ ಅಸ್ಪೃಶ್ಯತೆಯ ಕುರಿತಾದ ಚಿಂತನೆಗಳು ನಿಲುವುಗಳು ದೇಶದ ವಿವಿಧ ಕಡೆ ಪ್ರಭಾವ ಬೀರಿತು. 1920 ರಿಂದ 1948ರ ಕಾಲದಲ್ಲಿ ನಿಜಾಮ್ ಕರ್ನಾಟಕದ ದಲಿತ ಚಳವಳಿಯ ಉದಯದ ಮೇಲೆ ಗಾಂಧೀಜಿಯವರ ಚಿಂತನೆಗಳ ಪ್ರಭಾವ ಆಗಿರುವುದನ್ನು ಅಲ್ಲಗಳೆಯುವಂತಿಲ್ಲ.

***ಬಾಗೇರೆಡ್ಡಿ ವರ್ಮ***

ಬಾಗೇರೆಡ್ಡಿ ವರ್ಮ ನೇತೃತ್ವದಲ್ಲಿ 1906ರಲ್ಲಿ ಸ್ಥಾಪಿಸಿದ 'ಜಗನ್‌ಮಿತ್ರ ಮಂಡಲಿ' ನಿಜಾಮ್ ಸಂಸ್ಥಾನದ ಪ್ರದೇಶದಲ್ಲಿ ದಲಿತ ಜಾಗೃತಿಗೆ ನಾಂದಿ ಹಾಡಿತು. ಶತಮಾನಗಳ ಕಾಲ ಜಾತಿ ಶೋಷಣೆ ಮತ್ತು ದಮನಕ್ಕೆ ಗುರಿಯಾಗಿ ಅವಮಾನದ ಪರಿಸ್ಥಿತಿಗಳಲ್ಲಿ ಒಣಗಿ ಹೋದ ದಲಿತ ಜಾತಿಗಳ ವಿಮೋಚನೆಗೆ ಮಾರ್ಗವನ್ನು ತೋರಿಸಿತು. ಅವರು ಆರಂಭಿಸಿದ ಅನೇಕ ದಲಿತ ಜಾಗೃತಿ ಕಾರ್ಯಕ್ರಮಗಳು ನಿಜಾಮ್ ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಪಸರಿಸಿತು. ಇವರ ಚಿಂತನೆಗಳಿಂದ ಪ್ರಭಾವಿತರಾದ ನಿಜಾಮ್ ಕರ್ನಾಟಕದ ದಲಿತ ಮತ್ತು ದಲಿತೇತರ ನಾಯಕರು ದಲಿತ ಸಬಲೀಕರಣ ಚಳವಳಿಗಳಲ್ಲಿ ಭಾಗವಹಿಸಿದರು. ಬಾಗೇರೆಡ್ಡಿ ವರ್ಮ ರ ಹೋರಾಟ ಅವರ ಸಾವಿನ ನಂತರದಲ್ಲೂ ಮುಂದುವರೆದಿರುವುದು ಚರಿತ್ರೆಯಲ್ಲಿ ದಾಖಲಾಗಿದೆ.[11] ಒಟ್ಟಾರೆಯಾಗಿ ಭಾಗೇರೆಡ್ಡಿ ವರ್ಮ ಅವರ ಚಿಂತನೆಗಳ ಪ್ರಭಾವ ನಿಜಾಮ್ ಕರ್ನಾಟಕದ ದಲಿತ ಚಳವಳಿಯ ಮೇಲೆ ಪ್ರಭಾವ ಬೀರಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಇವರಲ್ಲದೆ ಶಾಹು ಮಹಾರಾಜ, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ಶ್ರೀ ನಾರಯಣ್ ಗುರು, ನಾಲ್ವಡಿ ಕೃಷ್ಣರಾಜ ಒಡೆಯರ್, ಕುಸುಮ್ ಧರ್ಮನ್, ಶ್ರೀ ಶಿವಯೋಗಿ ಸ್ವಾಮಿ ಅವರುಗಳು ತಮ್ಮ ಹೋರಾಟ ಹಾಗೂ ಕಾರ್ಯಸಾಧನೆಗಳ ಮುಖಾಂತರ ದಲಿತರಲ್ಲಿ ಜಾಗೃತಿ ಮೂಡಿಸಲು ತಮ್ಮ ಜೀವಿತಾವಧಿಯಲ್ಲಿ ಪ್ರಯತ್ನಿಸಿದರು. ಈ ಎಲ್ಲಾ ಮಹನೀಯರ ಕೊಡುಗೆಯೂ ಕೂಡ ನಿಜಾಮ್ ಕರ್ನಾಟಕದ ದಲಿತ ಯುವ ಚಿಂತಕರ ಮೇಲೆ ಪ್ರಭಾವ ಬೀರಿದ್ದು, 1906–1948ರ ಅವಧಿಯಲ್ಲಿ ಅನೇಕ ದಲಿತಪರ ಚಳವಳಿ ನಡೆದಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ.

**ಕೊನೆಟಿಪ್ಪಣಿಗಳು**


1. ಸೂರ್ಯನಾಥ್ ಯು ಕಾಮತ್, (1991). *ಹಿಸ್ಟೋರಿಯೋಗ್ರಫಿ ಆಫ್ ಕರ್ನಾಟಕ.* ಬೆಂಗಳೂರು ಪುಟ. 1
2. ಜಿಯಾಲಾಲ ಆರ್ಯ. (ಅನು: ಹೆಗಡೆ. ಆರ್.ಪಿ.). *ದಲಿತ ಸಮಾಜ ಇಂದಿನ ಸವಾಲುಗಳು.* ಪು.47
3. ಹೆಗಡೆ. ಕೆ. ಎಸ್. (2010). *ಮಹಾರಾಷ್ಟ್ರದಲ್ಲಿ ದಲಿತ ಚಳವಳಿಗಳು.* ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯ. ಪುಟ. 28–29
4. ರೋಮಿಲಾ ಥಾಪರ್. (2016). *ಲೋಕ ಚಿಂತಕರು.* (ಅನು, ಮಾಧವಿ, ಭಾರತೀ ದೇವಿ, ಟಿ. ಎಸ್. ವೇಣುಗೋಪಾಲ್ ಹಾಗೂ ಶೈಲಜ). ಅಭಿರುಚಿ ಪ್ರಕಾಶನ. ಪುಟ 33–35
5. ಸಬರದ ಬಸವರಾಜ. *ಬಸವೇಶ್ವರ ಮತ್ತು ಪುರಂದರದಾಸ.* ಪುಟ. 125
6. ಸಿದ್ಧಲಿಂಗಯ್ಯ. ವಚನ ಚಳವಳಿ ಮತ್ತು ದಲಿತರು. ಪುಟ. 65
7. ಬ್ರಜ್ ರಂಜನ್ ಮಣಿ. (2019). *ಚರಿತ್ರೆಯ ಅಬ್ರಾಹಮಣೀಕರಣ ಭಾರತ ಸಮಾಜದಲ್ಲಿ ಯಜಮಾನಿಕೆ ಮತ್ತು ಪ್ರತಿರೋಧ.* (ಅನು, ಎ.ರೀಟಾರೀನಿ). ಟಿಡಿಎಸ್ ಪಬ್ಲಿಕೇಷನ್ಸ್. ಪುಟ. 173–176

8. ಅಶೋಕ ಚೌಸಳಕರ. (2013). *ಜ್ಯೋತಿಬಾ ಫುಲೆ ಮತ್ತು ರೈತ ಚಳವಳಿ.* (ಅನು, ಜೆ.ಪಿ. ದೊಡಮನಿ). ಲಡಾಯಿ ಪ್ರಕಾಶನ. ಪುಟ. 7

9. ಬ್ರಜ್ ರಂಜನ್ ಮಣಿ. (2019). ಪೂರ್ವೋಕ್ತ, ಪುಟ. 173–176

10. ಜಿಯಾಲಾಲ ಆರ್ಯ. ಪೂರ್ವೋಕ್ತ, ಪುಟ. 78–79

11. ಸತ್ಯನಾರಯಣ ಅಡಪ ಆಂಧ್ರಪ್ರದೇಶದಲ್ಲಿ ನೂರು ವರ್ಷಗಳ ದಲಿತ ಚರಿತೆ. (ಅನು, ನಾಗರಾಜ ಜಿ. ಪಿ.). ಏಕಾಂತಗಿರಿ ಟ್ರಸ್ಟ್ ಪುಟ. 9–16